# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 690 / 2013

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿಗಳು** : ಗಂಗಾಧರ ಮತ್ತು ಇತರರು

**ಚಾಸಾ :- 02 / ಪ್ರಾಸಾ :- 02**

| | |
|---|---|
| ಹೆಸರು | **ಶಿವನಂಜಪ್ಪ ಅಲಿಯಾಸ್ ನಂಜುಂಡಪ್ಪ** |
| ತಂದೆಯ / ಗಂಡನ ಹೆಸರು | **ಮಲ್ಲಿಗೇಗೌಡ** |
| ವಯಸ್ಸು | **58** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ಹೊನ್ನೇನಹಳ್ಳಿ ಗ್ರಾಮ, ತಿಪಟೂರು ತಾಲ್ಲೂಕು** |

**ದಿನಾಂಕ: 13-12-2019 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** :- **ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** :-

ದಿನಾಂಕ: 05-06-2013 ರಂದು ಒಂದು ಟಾಟ ಇಂಡಿಕಾ ಕಾರನ್ನು 1 ಮತ್ತು 2 ನೇ ಆರೋಪಿತರುಗಳು ಬಾಡಿಗೆಗೆ ಮಾತನಾಡಿಕೊಂಡು ಅಲ್ಲಿ ಚಾಸಾ-1 ರವರನ್ನು ಹತ್ತಿಸಿಕೊಂಡು ಸದರಿಯವರ ಕಣ್ಣಿಗೆ ಮಣ್ಣನ್ನು ಎರೆಚಿ ಚಾಕು ತೋರಿಸಿ ತನ್ನ ಬಳಿ ಇದ್ದಂತಹ ಎರಡು ಮೊಬೈಲ್ ಮತ್ತು 600 ರೂಪಾಯಿ ನಗದನ್ನು ಕಿತ್ತುಕೊಂಡು ಸದರಿಯವರ ಕಾರನ್ನು ಕಳ್ಳತನ ಮಾಡಿದ ಬಾಬ್ತು, ಪೋಲಿಸರು ಅಮಾನತು

ಮಹಜರ್ ಕ್ರಮವನ್ನು ದಿನಾಂಕಃ 19-06-2013 ರಂದು ಅನುಸರಿಸಿದ್ದು, ಸದರಿ ದಿನದಂದು ನಾನು ನೊಣವಿನಕೆರೆಗೆ ನನ್ನ ಕೆಲಸದ ನಿಮಿತ್ತ ಬಂದಿದ್ದು, ನೊಣವಿನ ಕೆರೆಯ ಪೋಲಿಸ್ ಠಾಣೆಯ ಮುಂಭಾಗದಲ್ಲಿ 1ನೇ ಆರೋಪಿ ಸಮಕ್ಷಮ ಅಮಾನತು ಮಹಜರ್ ಕ್ರಮ ಅನುಸರಿಸಿದ್ದಂತಹ ಸಮಯದಲ್ಲಿ ನಾನು ಸಹ ಹಾಜರಿದ್ದು, ನನ್ನ ಸಮಕ್ಷಮ ಪೋಲಿಸರು ಮಧ್ಯಾಹ್ನ 3 ರಿಂದ 4 ಗಂಟೆಯ ಸಮಯದಲ್ಲಿ ಅಮಾನತು ಮಹಜರ್ ಕ್ರಮ ಅನುಸರಿಸಿ ಇಂಡಿಕಾ ಕಾರು ಹಾಗೂ ಎರಡು ನೊಕಿಯಾ ಮೊಬೈಲನ್ನು ಅಮಾನತು ಪಡಿಸಿಕೊಂಡು ಹಾಗೂ ಆರೋಪಿಯನ್ನು ಸಹ ತಮ್ಮ ವಶಕ್ಕೆ ತೆಗೆದಕೊಂಡಿರುತ್ತಾರೆ. ಮಹಜರ್ ಸಮಯದಲ್ಲಿ ನಾನು ಮತ್ತು ಚಾಸಾ-3, ಚಾಸಾ-5 ಮತ್ತು 6 ರವರು ಸಹ ಮಹಜರ್ ಸಮಯದಲ್ಲಿ ಹಾಜರಿದ್ದರು. ಕಾರಿನ ಮೂಲ ನಂಬರ್ ಪ್ಲೇಟ್ ನಂಬರ್ ಆದ ಕೆಎ-05-ಎಎ-1945 ನ್ನು ಬದಲಾಯಿಸಿ ತಮ್ಮ ಇಚ್ಛೆಯ ನಂಬರ್ ಆರೋಪಿತರುಗಳು ಕಾರಿಗೆ ಹಾಕಿಕೊಂಡಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಅಮಾನತು ಮಹಜರ್ ಆಗಿದ್ದು, ಅಮಾನತು ಮಹಜರ್ ನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಿಪಿ-08 ರಲ್ಲಿರುವ ಎಲ್ಲಾ ಅಂಶಗಳನ್ನು ಓದಿ ಕೇಳಿ ತಿಳಿದುಕೊಂಡು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ. ಆರೋಪಿಯನ್ನು ನೋಡಿದಲ್ಲಿ ಗುರುತಿಸುತ್ತೇನೆ. ನಿಪಿ-3 ರಿಂದ ನಿಪಿ-6 ನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವಿಚಾರವಾಗಿ ನಾನು ಪೋಲಿಸರಿಗೆ ಹೇಳಿಕೆಯನ್ನು ಸಹ ನೀಡಿರುತ್ತೇನೆ.

**ಪಾಟೀ ಸವಾಲು** ಃ- **ಶ್ರೀ. ಸಿ.ಎನ್.** ವಕೀಲರಿಂದ **ಆರೋಪಿಗಳ** ಪರವಾಗಿ ಃ-

**ಸಿ.ಸಿ. ಸಂಖ್ಯೆ: 690 / 2013**
**ಚಾಸಾ-02 / ಪ್ರಾಸಾ-02**

ಅಮಾನತು ಮಹಜರ್ ಮಾಡುವ ಬಾಬ್ತು ಪೋಲಿಸರುನನಗೆ ಯಾವುದೇ ರೀತಿಯ ನೋಟಿಸ್ ನೀಡಿರುವುದಿಲ್ಲ. ನಿಪಿ-08 ರ ದಾಖಲಾತಿಯನ್ನು ಠಾಣೆಯ ಒಳಗೆ ಬರೆದಿರಲಾಗಿದ್ದು ಹಾಗೂ ನೀವು ಸಹ ಅಲ್ಲಿಯೇ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ಠಾಣೆಯ ಮುಂಭಾಗ ಬರೆದಿರಲಾಗಿದ್ದು, ನಾನು ಸಹ ಅಲ್ಲಿಯೇ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಮಹಜರ್ ಕ್ರಮ ಅನುಸರಿಸುವ ಸಮಯದಲ್ಲಿ ನಾನು, ಪಿ.ಎಸ್.ಐ. ಪೋಲಿಸರಾದ ಗೋಪಾಲ ಮತ್ತು ಧನಂಜಯ, ನನ್ನ ಸ್ನೇಹಿತರಾದ ಲಕ್ಷ್ಮೀಕಾಂತ ಹಾಗೂ ಸಾರ್ವಜನಿಕರು ಹಾಜರಿದ್ದರು. ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-08 ನ್ನು ಸ್ಥಳದಲ್ಲಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಅ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**